ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 133-138
©IIMRD, Mysuru
IIMRD JOURNALS
www.iimrd.com

# ಥಾಮಸ್ ಹಾಬ್ಸ್ ಮತ್ತು ಜಾನ್‌ಲಾಕ್‌ರವರ ರಾಜಕೀಯ ಚಿಂತನೆಗಳು

ಬಸವರಾಜು. ಆರ್[1]

**ಪೀಠಿಕೆ**

ಸಾಮಾಜಿಕ ಸಂಸ್ಥೆಗಳಲ್ಲೆಲ್ಲಾ ಅತ್ಯಂತ ವ್ಯಾಪಕ ಹಾಗೂ ಪ್ರಬಲವಾದ ಸಂಸ್ಥೆ ರಾಜ್ಯ. ಮನುಷ್ಯರು ಇರುವೆಡೆಯಲ್ಲೆಲ್ಲಾ ನಾವು ಸಂಘಟನೆ ಮತ್ತು ಅಧಿಕಾರಗಳನ್ನು ಕಾಣುತ್ತೇವೆ. ಈ ಸಂಘಟನೆ ಮತ್ತು ಅಧಿಕಾರಗಳು ರಾಜ್ಯದ ಅಸ್ತಿತ್ವವನ್ನು ಸೂಚಿಸುತ್ತವೆ. ರಾಜ್ಯವು ಒಂದು ಸಹಜ ಸಂಸ್ಥೆ. ಏಕೆಂದರೆ ಅದು ಮನುಷ್ಯನ ಮೂಲ ಪ್ರವೃತ್ತಿಗಳಿಂದ ಉಗಮವಾದದ್ದು. ರಾಜ್ಯದ ಉಗಮವು ಹೇಗಾಯಿತು ಎಂಬುದು ರಾಜಕೀಯ ತಜ್ಞರನ್ನು ಕಾಡಿರುವ ಅತಿ ಮುಖ್ಯ ಪ್ರಶ್ನೆ. ಈ ಪ್ರಶ್ನೆಗೆ ಥಾಮಸ್ ಹಾಬ್ಸ್ ಮತ್ತು ಜಾನ್‌ಲಾಕ್ ನೀಡಿರುವ ಉತ್ತರಕ್ಕೆ "ಸಾಮಾಜಿಕ ಒಪ್ಪಂದವಾದ" (Social Contract Theory) ಎಂದು ಕರೆಯುತ್ತಾರೆ. ಇವರ ರಾಜಕೀಯ ಸಿದ್ಧಾಂತಗಳನ್ನು ಕೆಳಕಂಡಂತೆ ವಿವರಿಸಬಹುದು.

**ಥಾಮಸ್ ಹಾಬ್ಸ್ (1588-1679)**

ಬ್ರಿಟಿಷ್ ತಾತ್ತ್ವಿಕನಾದ ಹಾಬ್ಸ್‌ನ ರಾಜಕೀಯ ವಿಚಾರಗಳು ಆತನ De Cive (1640), The Elements of Law (1650) ಮತ್ತು Leviathan (1651) ಎಂಬ ಗ್ರಂಥಗಳಲ್ಲಿ ದೊರೆಯುತ್ತದೆ. ಹಾಬ್ಸ್ ರಾಜ್ಯ ಸ್ಥಾಪನೆಯ ಪೂರ್ವಸ್ಥಿತಿಯನ್ನು ನೈಸರ್ಗಿಕ ಅಥವಾ ಪ್ರಾಕೃತ ಅವಸ್ಥೆಯೆಂದು ಕರೆಯುತ್ತಾನೆ. ಈ ಸ್ಥಿತಿಯಲ್ಲಿ ಮನುಷ್ಯನ ಚಟುವಟಿಕೆಗಳು ಕಾನೂನಿನಿಂದ ನಿಯಂತ್ರಿತವಾಗಿರುವುದಿಲ್ಲ. ಎಲ್ಲರ ಶಕ್ತಿಯು ಸಮವಾಗಿದ್ದರೂ ಮನುಷ್ಯರು ಸ್ವಭಾವತಃ ಕ್ರೂರಿಗಳಾಗಿರುವುದರಿಂದ ಭಯದ ವಾತಾವರಣವಿರುತ್ತದೆ. ಈ ಭಯದ ವಾತಾವರಣವನ್ನು ತಡೆಗಟ್ಟಲು ಅವರು ತಮಗೆ ತಾವೇ ಕೆಲವು ಒಪ್ಪಂದಗಳನ್ನು (contract) ಮಾಡಿಕೊಂಡು ಅವುಗಳನ್ನು ಪಾಲಿಸಲು ತೀರ್ಮಾನಿಸುತ್ತಾರೆ. ಈ ಒಪ್ಪಂದದ ಮೇರೆಗೆ ಅವರೊಬ್ಬ ಪ್ರತಿನಿಧಿ ಅಥವಾ ಪ್ರಭುವನ್ನು ಆರಿಸುತ್ತಾರೆ. ಅವನಿಗೆ ಬದುಕುವ ಮೂಲಭೂತ ಹಕ್ಕಿನ ಹೊರತಾಗಿ ಉಳಿದೆಲ್ಲ ಹಕ್ಕುಗಳನ್ನೂ ಸ್ವಪ್ರೇರಣೆಯಿಂದ ಒಪ್ಪಿಸಿ ಬಿಡುತ್ತಾರೆ. ಇಲ್ಲಿ ವ್ಯಕ್ತಿಯ ಇಚ್ಛೆಯ ಸ್ಥಾನವನ್ನು ಪ್ರತಿನಿಧಿಯ ಇಚ್ಛೆಯು ಆಕ್ರಮಿಸುತ್ತದೆ. ಈ ಪ್ರತಿನಿಧಿಯನ್ನೇ ಹಾಬ್ಸ್ Leviathan ಎನ್ನುವುದು. ಈ ಬೈಬಲ್ ಶಬ್ದದ ಮೂಲಾರ್ಥ ಬೃಹತ್ ನೌಕೆಯೆಂದು. ಜನಸಾಮಾನ್ಯನಿಗಿಂತಲೂ ಪ್ರತಿನಿಧಿಯು ಶಕ್ತಿಶಾಲಿ ಎಂಬುದನ್ನು ಇದು ಸೂಚಿಸುತ್ತದೆ. ಜನರೇ ಅಧಿಕಾರ ನೀಡುವುದರಿಂದ ಆತನ ಪ್ರಾತಿನಿಧ್ಯ ಕೃತಕವಾದುದು. ವೈಯಕ್ತಿಕ ಇಚ್ಛೆಯನ್ನು ಪ್ರತಿನಿಧಿಸುವುದರಿಂದ ಪ್ರತಿನಿಧಿಯನ್ನು "ಪ್ರತಿನಿಧಿಯ ಸೋಗಿನ ವ್ಯಕ್ತಿ" (Feigned Person) ಎಂದು ಕರೆಯುವುದುಂಟು.

---

*[1] ಸಂಶೋಧಕರು, ತತ್ವಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು–570 006.*

ಒಂದು ಮುಖ್ಯ ವಿಷಯವೆಂದರೆ ಈ ಮೂಲ ಒಪ್ಪಂದವು ಜನರ ನಡುವೆಯೇ ಹೊರತು ಜನ ಮತ್ತು ಪ್ರಭುವಿನ ನಡುವೆ ಅಲ್ಲ. ಪ್ರಭುವು ಈ ಒಪ್ಪಂದದ ಭಾಗಿಯಲ್ಲ. ಆತನು ಅದರ ಪರಿಣಾಮ. ಆದ್ದರಿಂದ ಅವನ ಕಾರ್ಯಕ್ಕೆ ಜನರು ಹೊಣೆಗಾರರೇ ಹೊರತು ಅವನಲ್ಲ. ಆತನ ಪ್ರಭುತ್ವವು ನಿರುಪಾಧಿಕವಾದುದು. ಅವನು ಇನ್ನಾವುದೇ ಸಂಘ ಸಂಸ್ಥೆಗಳಿಗೆ ಅಧೀನನಲ್ಲ. ಹಾಗೆಯೇ ಅವನ ಅಧಿಕಾರವು ಇನ್ನೊಬ್ಬ ಪ್ರಭುವಿನೊಂದಿಗೆ ಹಂಚಲ್ಪಟ್ಟಿಲ್ಲ ಅಥವಾ ಅದನ್ನು ಇನ್ನೊಬ್ಬರಿಗೆ ವರ್ಗಾಯಿಸಲೂ ಸಾಧ್ಯವಿಲ್ಲ. ಎಂದರೆ ಒಮ್ಮೆ ಅಧಿಕಾರವನ್ನು ನೀಡಿದ ಜನರು ಅದನ್ನು ಅವನಿಂದ ಪುನಃ ಪಡೆಯುವಂತಿಲ್ಲ. ಯಾವುದೇ ಕಾರಣಕ್ಕೂ ಮಾಡಿಕೊಂಡ ಒಪ್ಪಂದವು ರದ್ದಾಗಬಾರದು. ಪ್ರಭುವು ಜನರ ಪ್ರತಿನಿಧಿಯಾದ್ದರಿಂದ ಅವನು ಜನರಿಗೆ ಅನ್ಯಾಯ ಮಾಡಲಾರನೆಂದು ಹಾಬ್ಸ್ ಮತ. ಅವನು ತನ್ನ ವರ್ತನೆಯಲ್ಲಿ ದೇವರಿಗೆ ಮಾತ್ರ ಅಧೀನ, ಪ್ರಜೆಗಳಿಗಲ್ಲ. ಕಾನೂನು ಪ್ರಜೆಗಳಿಗೆ ಮಾತ್ರ ಅನ್ವಯಿಸುವುದೇ. ಹೂರತು ಪ್ರಭುವಿಗಲ್ಲ ಪ್ರಜೆಗಳ ಹಕ್ಕನ್ನು ಮತ್ತು ಅವರ ನಂಬಿಕೆಗಳನ್ನು ನಿರ್ಧರಿಸುವವನೂ ಪ್ರಭುವೇ. ಹಾಬ್ಸ್ ದೃಷ್ಟಿಯಲ್ಲಿ ರಾಜ್ಯ ಸರ್ಕಾರ ಪ್ರಭುತ್ವ, ಪ್ರಭು, ಪ್ರತಿನಿಧಿ ಇವೆಲ್ಲವು ಪರ್ಯಾಯಾತ್ಮಕ ಸರ್ಕಾರವು ವಿಸರ್ಜನೆಯಾಯಿತೆಂದರೆ ರಾಜ್ಯವೂ ವಿಸರ್ಜಿತವಾಗಿ ಸಮಾಜವು ಪುನಃ ಪ್ರಾಕೃತಾವಸ್ಥೆಗೆ ಮರಳುತ್ತದೆ.

ಆದರೂ ಹಾಬ್ಸ್ ಕೆಲವು ವಿರಳ ಸಂದರ್ಭಗಳಲ್ಲಿ ಪ್ರಭುವಿನ ಅಧಿಕಾರಕ್ಕೆ ಪರಿಮಿತಿಯನ್ನು ಒಡ್ಡುತ್ತಾನೆ. ಪ್ರಭುವು ಪ್ರಜೆಗಳ ಪ್ರಾಣಕ್ಕೆ ಕಂಟಕನಾದಾಗ, ಅವರನ್ನು ಸೈನಿಕ ವೃತ್ತಿಗೆ ಸೇರಬೇಕೆಂದು ಬಲಾತ್ಕರಿಸಿದಾಗ ಮತ್ತು ಅವರನ್ನು ಪ್ರಾಣಾಪಾಯದಿಂದ ರಕ್ಷಿಸಲು ವಿಫಲನಾದಾಗ ಒಪ್ಪಂದವು ರದ್ದಾಗುತ್ತದೆ. ಪ್ರಭುತ್ವದ ಮೂಲ ಉದ್ದೇಶವೇ ಪ್ರಜಾರಕ್ಷಣೆ. ಬದುಕು ಎಂಬುದು ಮನುಷ್ಯನ ಮೂಲಭೂತ ಹಕ್ಕು. ಈ ಹಕ್ಕಿಗೆ ದಕ್ಕೆಯೊದಗಿದಲ್ಲಿ ಪ್ರಭುವಿಗೆ ವ್ಯಕ್ತಿಯ ವಿಧೇಯತೆಯು ಅರ್ಥಹೀನವಾಗುತ್ತದೆ. ಮೂಲಭೂತ ಹಕ್ಕಿಗೆ ಚ್ಯುತಿ ಬಂದಲ್ಲಿ ಪ್ರಜೆಗಳಿಗೆ ಪ್ರಭುವನ್ನು ವಿರೋಧಿಸುವ ಹಕ್ಕಿದೆಯೆಂಬ ವಿಷಯದಲ್ಲಿ ಹಾಬ್ಸ್‌ನ ರಾಜಕೀಯ ಸಿದ್ಧಾಂತ ಸತ್ವಪೂರಿತ. ಅಲ್ಲದೇ ಅವನ ಅಧಿಕಾರ ಕೇಂದ್ರೀಕರಣ ಸಿದ್ಧಾಂತದ ಹಿನ್ನೆಲೆಯಲ್ಲಿ ಕೆಳಕಂಡ ಉದ್ದೇಶಗಳಿವೆ.

ಮೊದಲನೆಯದು ಜನರಿಗೆ ಸರ್ಕಾರದ ಅಗತ್ಯವಿದೆ, ಎರಡನೆಯದು ಅಧಿಕಾರವಿದ್ದಲ್ಲಿ ಸರ್ಕಾರದ ಕಾರ್ಯಸಾಮರ್ಥ್ಯ ಅಧಿಕವಾಗುತ್ತದೆ ಮತ್ತು ಜನರಲ್ಲಿ ಶಿಸ್ತು ಮೂಡುತ್ತದೆ ಎಂಬುದಾಗಿದೆ.

ಹಾಬ್ಸ್ ಪ್ರಕಾರ ಪ್ರಜೆಗಳಿಗೆ ಅಗತ್ಯಕ್ಕಿಂತಲೂ ಹೆಚ್ಚು ಅಧಿಕಾರವಿದ್ದರೆ ಅವರು ತಮ್ಮ ಅಧಿಕಾರವನ್ನು ಶೀಘ್ರವಾಗಿ ಚಲಾಯಿಸುವ ಪ್ರಲೋಭನೆಗೆ ಒಳಗಾಗಿ ಪ್ರಭುವಿಗೆ ಆಳಲು ಸಾಕಷ್ಟು ಕಾಲಾವಕಾಶವನ್ನೇ ನೀಡದಿರಬಹುದು. ಇದು ಆಂತರಿಕ ಕಲಹದಲ್ಲಿ ಕೊನೆಗೊಳ್ಳುವುದು ಖಂಡಿತ. ರಾಜ್ಯದ ಶಾಂತಿ ರಕ್ಷಣೆಗಳನ್ನು ಗಮನದಲ್ಲಿರಿಸಿಕೊಂಡು ಹಾಬ್ಸ್ ಪ್ರಜಾ ಸ್ವಾತಂತ್ರ್ಯವನ್ನು ಕುಂಠಿತಗೊಳಿಸಿದ.

ಹೀಗಿದ್ದರೂ ಹಾಬ್ಸ್‌ನ ರಾಜಕೀಯ ಸಿದ್ಧಾಂತದಲ್ಲಿ ಕೆಳಕಂಡ ದೋಷಗಳಿವೆ.

- ಹಾಬ್ಸ್‌ನ ರಾಜಕೀಯ ಸಿದ್ಧಾಂತವು ಮಾನವನನ್ನು ಕುರಿತ ಕೆಲವು ತಪ್ಪು ಕಲ್ಪನೆಯನ್ನು ಆಧರಿಸಿದೆ. ಹಾಬ್ಸ್ ಮಾನವನು ಮೂಲತಃ ಕ್ರೂರಿಯೆಂದು ಮಾನವ ಘನತೆಯನ್ನು ಕೀಳಾಗಿಸಿದ.

- ಆತನ ಪ್ರಕಾರ ರಾಜ್ಯ ಮತ್ತು ರಾಜ ಒಂದೇ ಆದ್ದರಿಂದ ಮನುಷ್ಯರು ಪ್ರಾಕೃತ ವ್ಯವಸ್ಥೆಗೆ ಮರಳುವುದು ಖಂಡಿತ. ಏಕೆಂದರೆ ರಾಜನು ಸತ್ತ ನಂತರ ರಾಜ್ಯವೂ ರದ್ದಾಗುತ್ತದೆ. ಹೀಗೆ ಹಾಬ್ಸ್ ಪ್ರಕಾರ ರಾಜ್ಯವು ಒಂದು ಅಶಾಶ್ವತ ಸಂಸ್ಥೆಯಾಗುತ್ತದೆ
- ಹಾಬ್ಸ್ ದೃಷ್ಟಿಯಲ್ಲಿ ಅಧಿಕಾರ ಕೇಂದ್ರೀಕರಣದಿಂದ ಸರ್ಕಾರದ ಕಾರ್ಯ ಸಾಮರ್ಥ್ಯ ಹೆಚ್ಚುವುದಾದರೂ ಅವನು ಅಪಾಯದ ಮತ್ತೊಂದು ಮುಖವನ್ನು ಆಲಕ್ಷಿಸಿದ. ಅತನು ತನ್ನ ವಾದದಲ್ಲಿ ಪ್ರಜೆಗಳ ಮೂಲಭೂತ ಹಕ್ಕಿಗೆ ಎಷ್ಟೇ ರಕ್ಷಣೆಯನ್ನು ನೀಡಿದರೂ ರಾಜನು ತನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆ ಇದೆ ಎಂಬ ಅಂಶವನ್ನು ಮರೆತ. ಏಕೆಂದರೆ ಅವನ ಪ್ರಕಾರ ರಾಜನಿಗೆ ಒಮ್ಮೆ ನೀಡಿದ ಹಕ್ಕುಗಳನ್ನು ಪ್ರಜೆಗಳು ಪುನಃ ಹಿಂದಕ್ಕೆ ಪಡೆಯುವಂತಿಲ್ಲ. ಪ್ರಜೆಗಳು ಹಕ್ಕುಗಳನ್ನು ಪುನಃ ಹಿಂಪಡೆಯಲು ರಾಜನು ಮರಣ ಹೊಂದುವವರೆಗೆ ಕಾಯಬೇಕಾಗುತ್ತದೆ. ಅಲ್ಲಿಯವರೆಗೆ ಅವರು ಅವನು ಮಾಡಬಹುದಾದ ಅನ್ಯಾಯಗಳೆಲ್ಲವನ್ನೂ ಸಹಿಸಿಕೊಳ್ಳಬೇಕಾಗುತ್ತದೆ. ಒಟ್ಟಾರೆ ಹಾಬ್ಸ್ ತನ್ನ ರಾಜಕೀಯ ಸಿದ್ಧಾಂತದಲ್ಲಿ ಪ್ರಜಾಸ್ವಾತಂತ್ರದ ವಿರೋಧಿಯಾದ.
- ಕೊನೆಯದಾಗಿ ಇಲ್ಲಿ ರಾಜ್ಯ ವ್ಯವಸ್ಥೆಯು ಕೃತಕವಾದ ಭಯದಿಂದ ನಿಯಂತ್ರಿತವಾಗಿದೆ. ಎಂದರೆ ಇಲ್ಲಿ ಜನರ ಒಪ್ಪಂದವನ್ನು ಅವರ ವಿವೇಕವು ನಿಯಂತ್ರಿಸುವುದಿಲ್ಲ. ಭಯದ ಒತ್ತಡವು ನಿಯಂತ್ರಿಸುತ್ತದೆ.

**ಜಾನ್ ಲಾಕ್ (1632-1704)**

1688ರ ಇಂಗ್ಲೆಂಡಿನ ರಕ್ತರಹಿತ ಕ್ರಾಂತಿಗೆ ಲಾಕ್‌ನ ರಾಜಕೀಯ ನೀತಿಯೇ ಆಧಾರ. ಆತನ The Second Treatise on Civil Government ಐತಿಹಾಸಿಕವಾಗಿ ಬಹಳ ಪ್ರಭಾವ ಬೀರಿದ ಗ್ರಂಥ. ಇದು ಇಂಗ್ಲೆಂಡಿನ ಅಂದಿನ ರಾಜಕೀಯ ಚಿಂತನೆಗಳ ಮೇಲೆ ಬೆಳಕನ್ನು ಚೆಲ್ಲುತ್ತದೆ. ಲಾಕ್‌ನ ರಾಜಕೀಯ ನೀತಿಯಲ್ಲಿ ತಾರ್ಕಿಕ ಸುಸಂಬದ್ಧತೆಗಿಂತಲೂ (Logical Consistency) ಪ್ರಾಯೋಗಿಕತೆಯು ಎದ್ದು ಕಾಣುತ್ತದೆ.

ಆತನ ಪ್ರಕಾರ ಸಾರ್ವತ್ರಿಕ ಒಳಿತಿಗೆ ಸಾಧನವಾಗಿರುವ ಯಾವುದೇ ಸಿದ್ಧಾಂತವು ಸ್ವೀಕಾರಾರ್ಹ. ರಾಜ್ಯಸ್ಥಾಪನೆಯ ಪೂರ್ವಸ್ಥಿತಿಯನ್ನು ಕುರಿತಂತೆ ಲಾಕ್‌ನ ಅಭಿಪ್ರಾಯವು ಹಾಬ್ಸ್‌ಗಿಂತಲೂ ವಿರುದ್ಧವಾದುದು. ಹಾಬ್ಸ್ ಹೇಳುವಂತೆ ಅದೇನೂ ಕಲಹದ ಸ್ಥಿತಿಯಲ್ಲ. ಅದು ಸ್ವಾರ್ಥ ಮತ್ತು ಕ್ರೌರ್ಯವನ್ನು ಪ್ರತಿನಿಧಿಸದೇ ಪರಸ್ಪರ ಶಾಂತಿ ಸೌಹಾರ್ದತೆಗಳಿಂದ ಕೂಡಿರುತ್ತದೆ. ಇಲ್ಲಿ ಬಹುತೇಕ ಮಂದಿ ಆಂತರಿಕ ನೀತಿಗೆ ಬದ್ಧರಾಗಿರುತ್ತಾರೆ. ಆದರೆ ಈ ಸ್ಥಿತಿಯಲ್ಲಿ 3 ಕೊರತೆಗಳುಂಟು. ಅವುಗಳೆಂದರೆ ನಿರ್ದಿಷ್ಟ ಕಾನೂನು ಇರುವುದಿಲ್ಲ, ನಿಷ್ಪಕ್ಷಪಾತನಾದ ನ್ಯಾಯಮೂರ್ತಿ ಇರುವುದಿಲ್ಲ, ಆ ನ್ಯಾಯಮೂರ್ತಿಯ ತೀರ್ಪನ್ನು ಜಾರಿಗೆ ತರುವ ಅಧಿಕಾರವಿರುವುದಿಲ್ಲ. ಈ ಕೊರತೆಗಳೇ ಸಾರ್ವತ್ರಿಕ ಹಿತದೃಷ್ಟಿಯಿಂದ ಜನರನ್ನು ಒಪ್ಪಂದಕ್ಕೆ ಪ್ರೇರೇಪಿಸುವುದು.

ಈ ಒಪ್ಪಂದವು ಎರಡು ಹಂತಗಳಲ್ಲಿ ಜರುಗುತ್ತದೆ. ಮೊದಲ ಒಪ್ಪಂದದಲ್ಲಿ ಜನರು ಸಮಾಜವನ್ನು ಸ್ಥಾಪಿಸಿಕೊಳ್ಳುತ್ತಾರೆ. ನಂತರ ಎರಡನೆಯ ಒಪ್ಪಂದದಲ್ಲಿ ಅವರು ಸರ್ಕಾರವೊಂದನ್ನು ರೂಪಿಸಿಕೊಳ್ಳುತ್ತಾರೆ. ದೊಡ್ಡ ಸಮಾಜದಲ್ಲಿ ಐಕಮತ್ಯವು ಅಸಾಧ್ಯವಾದ್ದರಿಂದ ಈ ಹಂತದಲ್ಲಿ ಸಮಾಜದ ಪ್ರತಿಯೊಬ್ಬ ಸದಸ್ಯನೂ ಬಹುಸಂಖ್ಯಾತರ ಇಚ್ಛೆಗೆ ತಲೆಬಾಗುತ್ತಾನೆ. ಎಂದರೆ ಮೊದಲ ಒಪ್ಪಂದವು ಕೇವಲ ಜನರಿಗೆ ಮಾತ್ರ ಸೀಮಿತವಾದರೆ ಎರಡನೇ ಒಪ್ಪಂದವು ಜನ ಹಾಗೂ ಸರ್ಕಾರದ ನಡುವೆ ಉಂಟಾಗುತ್ತದೆ. ಇಲ್ಲಿ ಜನರು ತಮ್ಮ ಕೆಲವು ಹಕ್ಕುಗಳನ್ನು ಉಳಿದ ಹಕ್ಕುಗಳ ರಕ್ಷಣೆಗೆಂದು ಸ್ವಪ್ರೇರಣೆಯಿಂದ ಒಂದು ಸಮಾನ ಅಧಿಕಾರಕ್ಕೆ ಅರ್ಪಿಸುತ್ತಾರೆ.

ಸರ್ಕಾರವು ಒಪ್ಪಂದದಲ್ಲಿ ಭಾಗಿಯೆಂಬುದು ಲಾಕ್‌ನ ರಾಜಕೀಯ ಚಿಂತನೆಯಲ್ಲಿ ಕಾಣಬರುವ ಒಂದು ಗಮನಾರ್ಹ ಅಂಶ. ಸರ್ಕಾರವು ಒಂದು ಟ್ರಸ್ಟ್ ಇದ್ದಂತೆ. ಅದಕ್ಕೆ ತನ್ನದೇ ಆದ ನೈತಿಕ ಹೊಣೆಗಾರಿಕೆಯಿದ್ದು ಆಡಳಿತ ನಡೆಸುವಲ್ಲಿ ಮತ್ತು ಸಮಾಜದ ವ್ಯವಸ್ಥೆಯನ್ನು ಕಾಪಾಡುವಲ್ಲಿ ಅದರ ಪಾತ್ರ ಬಹಳ ದೊಡ್ಡದು. ರಾಜ್ಯವಿರುವುದು ಪ್ರಜೆಗಳ ಬದುಕು ಸ್ವಾತಂತ್ರ್ಯಗಳನ್ನು ಕಾಪಾಡಲೆಂದು, ಅವರ ಅಗತ್ಯಗಳನ್ನು ಪೂರೈಸಲೆಂದು. ಸರ್ಕಾರವು ಒಪ್ಪಂದವನ್ನು ಉಲ್ಲಂಘಿಸಿದರೆ, ಪ್ರಜೆಗಳ ಹಿತವನ್ನು ಅಲಕ್ಷಿಸಿ ಹೊಣೆಗೇಡಿಯಾಗಿ ಅಧಿಕಾರವನ್ನು ದುರುಪಯೋಗಪಡಿಸಿಕೊಂಡರೆ ಪ್ರಜೆಗಳು ಅದನ್ನು ಉರುಳಿಸಿ ಅದರ ಸ್ಥಾನದಲ್ಲಿ ಬೇರೊಂದು ಸರ್ಕಾರವನ್ನು ಸ್ಥಾಪಿಸಲು ಅಥವಾ ಸಂಬಂಧಪಟ್ಟವರನ್ನು ಶಿಕ್ಷಿಸಲು ಅವರಿಗೆ ಪೂರ್ಣಾಧಿಕಾರವುಂಟು. ಅಧಿಕಾರವು ಯಾವಾಗಲೂ ಜನರಿಗೆ ಸೇರಿದುದು. ಸರ್ಕಾರವು ಜನರ ಇಚ್ಛೆಗೆ ಅಧೀನರಾದ ಸೇವಕರು ಮಾತ್ರ. ಈ ಅಧಿಕಾರವನ್ನು ಯಾರೂ ಜನರಿಂದ ಕಸಿದುಕೊಳ್ಳಲು ಸಾಧ್ಯವಿಲ್ಲ.

ಹಾಗೆಯೇ ಜನರೇ ಅದನ್ನು ತೊರೆದುಬಿಡಲೂ ಸಾಧ್ಯವಿಲ್ಲ. ಅದು ಅವರಿಗೆ ಜನ್ಮಸಿದ್ಧವಾದುದು. ಎಂದರೆ ಲಾಕ್‌ನ ಪ್ರಕಾರ ಪ್ರಭುತ್ವವು ನಿರುಪಾಧಿಕವಲ್ಲ. ಅದು ಪರಿಮಿತವಾದುದು. ಇಲ್ಲಿ ಜನರು ಸಾರ್ವತ್ರಿಕ ಹಿತಕ್ಕೆ ಅಗತ್ಯವಿರುವಷ್ಟು ಅಧಿಕಾರವನ್ನು ಮಾತ್ರ ಸರ್ಕಾರಕ್ಕೆ ನೀಡುತ್ತಾರೆ. ಉಳಿದ ಅಧಿಕಾರವು ಜನರಲ್ಲೇ ಮೀಸಲಾಗಿರುತ್ತದೆ. ಜನರು ಆಡಳಿತದಲ್ಲಿ ಭಾಗವಹಿಸದ ನಿಷ್ಕ್ರಿಯಪಾಲುದಾರರಾದರೆ (Sleeping partners) ಸರ್ಕಾರವು ಆಡಳಿತ ನಿರ್ವಹಿಸುವ ಸಕ್ರಿಯ ಪಾಲುದಾರ.

ಹಾಬ್ಸ್‌ಗೆ ವಿರುದ್ಧವಾಗಿ ಲಾಕನು ರಾಜ್ಯ ಮತ್ತು ಸರ್ಕಾರಗಳನ್ನು ಪ್ರತ್ಯೇಕಿಸಿದ. ಸರ್ಕಾರವು ಎರಡನೇ ಒಪ್ಪಂದದ ಪರಿಣಾಮವಾದ್ದರಿಂದ ಸರ್ಕಾರದ ರದ್ದು 2ನೇ ಒಪ್ಪಂದ ರದ್ದಾಗುವುದೇ ಹೊರತು ಸಮಾಜ ಸ್ಥಾಪನೆಗೆ ಕಾರಣವಾದ ಮೊದಲ ಒಪ್ಪಂದದ ರದ್ದಾಗುವುದಿಲ್ಲ ರಾಜ್ಯವು ತನ್ನ ಇಚ್ಛೆಯನ್ನು ಸರ್ಕಾರದ ಮೂಲಕ ಜಾರಿಗೆ ಬರುತ್ತದೆ. ಸರ್ಕಾರದ ವಿಷಯದಲ್ಲಿ ಲಾಕ್‌ನಿಗೆ ಇಷ್ಟವಾದುದು ಸಂವಿಧಾನಾತ್ಮಕ ಸರ್ಕಾರ ಅಥವಾ ಸಾಂಕುಶ ರಾಜಪ್ರಭುತ್ವ. ಇಲ್ಲಿ ರಾಜನಿಗೆ ಆಸ್ಪದವಿದೆಯಾದರೂ ಈಗಾಗಲೇ ವಿವರಿಸಿರುವಂತೆ ಅವನ ಪ್ರಭುತ್ವ ಸಾಂಕುಶ ಎಂದರೆ ಪ್ರಜೆಗಳಿಗೆ ಅಧೀನವಾದುದು, ಸೀಮಿತವಾದುದು. ಕಾಯಿದೆಗಳನ್ನು ರೂಪಿಸುವವರೇ ಅವುಗಳನ್ನು ಜಾರಿಗೆ ತರುವುದು ಲಾಕ್‌ನಿಗೆ ಅಷ್ಟು ರುಚಿಸಲಿಲ್ಲ.

ಆದ್ದರಿಂದಲೇ ಅವನು ಪ್ರಜೆಗಳ ಹಿತದೃಷ್ಟಿಯಿಂದ ಸರ್ಕಾರವನ್ನು ಶಾಸಕಾಂಗ (Legislature) ಮತ್ತು ಕಾರ್ಯಾಂಗಗಳೆಂದು (Executive) ವಿಂಗಡಿಸಿದುದು. ಇಡೀ ಸಾರ್ವಜನಿಕ ಹಿತದ ಪ್ರಶ್ನೆ ಬಂದಾಗ ಲಾಕ್ ಕ್ರಾಂತಿಯನ್ನು ಅದು ಸಂವಿಧಾನಾತ್ಮಕವಲ್ಲದಿದ್ದರೂ ಸಮರ್ಥಿಸುತ್ತಾನೆ. ಯಾವ ಯಾವ ಸಂದರ್ಭಗಳಲ್ಲಿ ಕ್ರಾಂತಿಗೆ ಮೊರೆ ಹೋಗಬೇಕೆಂದು ಎಂದರೆ ಕ್ರಾಂತಿಯನ್ನು ನಿರ್ಧರಿಸುವ ಸಂಧರ್ಭಗಳನ್ನು ಲಾಕನು ಸ್ಪಷ್ಟಪಡಿಸಲಿಲ್ಲ. ಲಾಕನ ಸಿದ್ಧಾಂತದಲ್ಲಿರುವ ಮತ್ತೊಂದು ದೋಷವೆಂದರೆ ಪ್ರಭುತ್ವಕ್ಕೆ ಮಿತಿಯನ್ನು ಒಡ್ಡುವುದು. ಕೆಲವು ಗಂಭೀರ ಸಂದರ್ಭಗಳಲ್ಲೂ ಸರ್ಕಾರವು ತನ್ನದೇ ಆದ ನಿರ್ಧಾರ ತೆಗೆದುಕೊಳ್ಳುವಂತಿಲ್ಲ. ಅದು ಜನರ ಒಪ್ಪಿಗೆಗೆ ಕಾಯಬೇಕು. ಲಾಕ್‌ನ ಈ ಸ್ವಾತಂತ್ರ್ಯ ನೀತಿಯು ಅಂತಿಮವಾಗಿ ಆತನ Laissez faire ಸಿದ್ಧಾಂತಕ್ಕೆ ಎಡೆಮಾಡಿಕೊಟ್ಟಿತು. ಇದರ ಮುಖ್ಯ ಅಂಶಗಳು ಎರಡು, ಅವುಗಳೆಂದರೆ ರಾಜ್ಯವು ತನ್ನ ಸದಸ್ಯರ ವ್ಯವಹಾರಗಳಲ್ಲಿ ಅಗತ್ಯಕ್ಕಿಂತಲೂ ಹೆಚ್ಚು ಹಸ್ತಕ್ಷೇಪ ಮಾಡಬಾರದು ಮತ್ತು ವ್ಯಕ್ತಿಗೆ ಆರ್ಥಿಕ ಕ್ಷೇತ್ರದಲ್ಲಿ ಯಾವುದೇ ಅಡಚಣೆಯಿಲ್ಲದೇ ತನ್ನದೇ ಆದ ಸ್ವಾತಂತ್ರ್ಯವುಂಟು.

**ಉಪಸಂಹಾರ**

ಒಟ್ಟಿನಲ್ಲಿ ಹಾಬ್ಸ್ ಮತ್ತು ಲಾಕ್‌ನ ರಾಜಕೀಯ ಚಿಂತನೆಗಳಲ್ಲಿನ ವ್ಯತ್ಯಾಸಗಳನ್ನು ಕೆಳಕಂಡಂತೆ ಗಮನಿಸಬಹುದು.

- ಹಾಬ್ಸ್ ನೈಸರ್ಗಿಕ ಸ್ಥಿತಿಯ ಕರಾಳ ಚಿತ್ರವನ್ನು ಸರಾಗವಾಗಿ ಕೂಡುತ್ತಾನೆ. ಈ ಸ್ಥಿತಿಯ ಮುಖ್ಯ ಲಕ್ಷಣ ಮನುಷ್ಯರಲ್ಲಿ ನೈತಿಕತೆಯ ಕೊರತೆ.
- ಲಾಕ್ ಪ್ರಕಾರ ನೈಸರ್ಗಿಕ ಸ್ಥಿತಿಯಲ್ಲಿ ಅಂತಃಕಲಹವಿರುವುದಿಲ್ಲ. ಜನರು ಅಂತರಿಕ ನೀತಿಗೆ ಬದ್ಧರು ಇದೂಂದು ಶಾಂತಿ ಸೌಹಾರ್ದಗಳ ಸ್ಥಿತಿ.
- ಹಾಬ್ಸ್ ಪ್ರಕಾರ ಮನುಷ್ಯರಲ್ಲಿ ಪರಸ್ಪರ ಭಯವು ರಾಜ್ಯ ಸ್ಥಾಪನೆಗೆ ಕಾರಣವಾದರೆ ಲಾಕ್ ಪ್ರಕಾರ ಕಾನೂನು ನಿಷ್ಪಕ್ಷಪಾತ ನ್ಯಾಯಮೂರ್ತಿ ಮತ್ತು ಅತನ ತೀರ್ಪನ್ನು ಜಾರಿಗೆ ತರುವ ಅಧಿಕಾರ. ಇವುಗಳ ಕೊರತೆಯು ಸಾಮಾಜಿಕ ಒಪ್ಪಂದಕ್ಕೆ ಪ್ರೇರಣೆ.
- ಹಾಬ್ಸ್ ಒಂದೇ ಒಂದು ಒಪ್ಪಂದವನ್ನು ಅಂಗಿಕರಿಸುತ್ತಾರೆ. ಈ ಮೂಲ ಒಪ್ಪಂದದಲ್ಲಿ ಸರ್ಕಾರ ಅಸ್ತಿತ್ವಕ್ಕೆ ಬರುವುದು.
- ಲಾಕ್ ಪ್ರಕಾರ ಎರಡು ಒಪ್ಪಂದಗಳಿದ್ದು ಸಮಾಜವು ಮೊದಲ ಒಪ್ಪಂದದಲ್ಲಿ ಮತ್ತು ಸರ್ಕಾರವು ಎರಡನೆ ಒಪ್ಪಂದದಲ್ಲೂ ಅಸ್ತಿತ್ವಕ್ಕೆ ಬರುತ್ತದೆ.
- ಹಾಬ್ಸ್ ಪ್ರಕಾರ ಒಪ್ಪಂದವು ಜನರಿಗೆ ಮಾತ್ರ ಸೀಮಿತವಾಗಿ ಸರ್ಕಾರವು ಅದರ ಭಾಗಿಯಲ್ಲ.
- ಲಾಕ್ ಪ್ರಕಾರ ಸರ್ಕಾರವು ಈ ಒಪ್ಪಂದದಲ್ಲಿ ಭಾಗಿ. ಅದು ಒಪ್ಪಂದವನ್ನು ಉಲ್ಲಂಘಿಸಿದರೆ ಅದನ್ನು ಉರುಳಿಸಿ ಬೇರೂಂದು ಸರ್ಕಾರವನ್ನು ಸ್ಥಾಪಿಸಲು ಪ್ರಜೆಗಳಿಗೆ ಅಧಿಕಾರವುಂಟು.
- ಹಾಬ್ಸ್ ಪ್ರಕಾರ ಒಮ್ಮೆ ನೀಡಿದ ಹಕ್ಕನ್ನು ಪ್ರಜೆಗಳು ಪ್ರಭುವಿನಿಂದ ಪುನಃ ಪಡೆಯುವಂತಿಲ್ಲ.

- ಲಾಕ್ ಪ್ರಕಾರ ಹಕ್ಕೆಂಬುದು ಮನುಷ್ಯನಿಗೆ ಜನ್ಮಸಿದ್ಧ. ಅದನ್ನು ಯಾರು ಕಸಿದುಕೊಳ್ಳುವಂತಿಲ್ಲ, ಪ್ರಭುವಿಗೆ ನೀಡಿದ ಹಕ್ಕನ್ನು ಪ್ರಜೆಗಳು ಯಾವುದೇ ಕ್ಷಣದಲ್ಲಿ ಪಡೆಯಬಹುದು.

**ಪರಾಮರ್ಶನ ಗ್ರಂಥಗಳು**


- Chatterjee Satischandra. (1964). ***The Problems of Philosophy.*** University of Calcutta. Calcutta.
- Tuck Richard. (1993). ***Philosophy and Government, 1572–1651.*** Cambridge University Press, Cambridge. United Kingdom.
- Lemetti Juhana. (2011). ***Historical Dictionary of Hobbes's Philosophy.*** Scarecrow Press, Lanham.
- Dunn. (1984). ***John Locke.*** Oxford University Press. London.
- Gibson J. (1917). ***Locke's Theory of Knowledge and its Historical Relations.*** Cambridge University Press. United Kingdom.


IIMRD JOURNALS